ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 30–10–2017

# ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ

ಬೆಳಗಾವಿಯಲ್ಲಿ ನವೆಂಬರ್ 13 ರಿಂದ ನಡೆಯಲಿರುವ ವಿಧಾನ ಮಂಡಲದ ಅಧಿವೇಶನ ವರದಿ ಮಾಡಲು ಬೆಂಗಳೂರಿನಿಂದ ನಿಯೋಜಿಸುವ ರಾಜ್ಯಮಟ್ಟದ ಸುದ್ದಿ ವಾಹಿನಿಗಳು ಹಾಗೂ ದಿನ ಪತ್ರಿಕೆಗಳ ಮಾನ್ಯತೆ ಪಡೆದ ಪತ್ರಕರ್ತರು ಹೆಸರುಗಳನ್ನು ವಾರ್ತಾ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯಲ್ಲಿ ಶ್ರೀ ಜಡಿಯಪ್ಪ ಗೆದ್ಲಗಟ್ಟಿ ಅವರ ಬಳಿ ನೋಂದಾಯಿಸಲು ಕೋರಿದೆ. ನೋಂದಾಯಿಸಿದ ಮಾಧ್ಯಮ ಪ್ರತಿನಿಧಿಗಳಿಗೆ ಬೆಳಗಾವಿ ಜಿಲ್ಲಾಡಳಿತವು ಒದಗಿಸುವ ಹೋಟೆಲ್ ಕೊಠಡಿಗಳನ್ನು ನೀಡಲಾಗುವುದು.

- ವಸತಿ ಸೌಲಭ್ಯವು ಕಡಿಮೆ ಇರುವ ಕಾರಣ ವಿದ್ಯುನ್ಮಾನ ಮಾಧ್ಯಮದ 6 ಪ್ರತಿನಿಧಿಗಳಿಗೆ(ವರದಿಗಾರರು, ಕ್ಯಾಮರಾಮನ್‌ಗಳು ಹಾಗೂ ತಾಂತ್ರಿಕ ಸಿಬ್ಬಂದಿ ಸೇರಿದಂತೆ) 3 ಡಬ್ಬಲ್ ರೂಂಗಳನ್ನು ಒದಗಿಸಲಾಗುವುದು.
- ಮುದ್ರಣ ಮಾಧ್ಯಮದ 4 ಪ್ರತಿನಿಧಿಗಳಿಗೆ 2 ಡಬ್ಬಲ್ ರೂಂಗಳನ್ನು ಒದಗಿಸಲಾಗುವುದು.
- ಬೆಳಗಾವಿಯ ವರದಿಗಾರರನ್ನು ಹೊರತುಪಡಿಸಿ ಇತರೆ ಜಿಲ್ಲೆಗಳ ಮಾನ್ಯತೆ ಪಡೆದ ಪತ್ರಕರ್ತರನ್ನು ನಿಯೋಜಿಸಿದಲ್ಲಿ ಪತ್ರಕರ್ತರು ಸೇರಿದಂತೆ ಮೇಲೆ ತಿಳಿಸಿದ ಸಂಖ್ಯೆಗೆ ಸೀಮಿತಗೊಳಿಸಲು ಕೋರಿದೆ.
- ತಾಂತ್ರಿಕ ಸಿಬ್ಬಂದಿ ಹಾಗೂ ಒ.ಬಿ. ವಾಹನಗಳ ಪ್ರವೇಶ ಪತ್ರಗಳನ್ನು ಪಡೆಯುವುದು ಆಯಾ ಸಂಸ್ಥೆಯದ್ದೇ ಜವಾಬ್ದಾರಿಯಾಗಿರುತ್ತದೆ.
- ಬೆಳಗಾವಿ ಹೊರತುಪಡಿಸಿ ಇತರೆ ಜಿಲ್ಲೆಗಳಿಂದ ಆಗಮಿಸುವ ಪತ್ರಕರ್ತರಿಗೆ ವಿಧಾನಸಭೆ/ವಿಧಾನ ಪರಿಷತ್ತಿನ ಪ್ರವೇಶ ಪತ್ರಗಳ ಅಗತ್ಯವಿದ್ದಲ್ಲಿ ಈ ಕಛೇರಿಗೆ ಪ್ರತ್ಯೇಕ ಮನವಿ ಸಲ್ಲಿಸಲು ಕೋರಿದೆ.
- ಬೆಂಗಳೂರಿನ ಪತ್ರಕರ್ತರಿಗೆ ಈಗಾಗಲೇ ನೀಡಿರುವ 2017 ರ ಡಿಸೆಂಬರ್ ಅವಧಿ ಇರುವ ಪ್ರವೇಶಪತ್ರವೇ ಅನ್ವಯವಾಗುತ್ತದೆ.
- ವಸತಿಗಾಗಿ ಹೆಸರು ನೋಂದಾಯಿಸಲು 2017 ನವೆಂಬರ್ 2 ಕೊನೆಯ ದಿನ. ವಸತಿ ಸೌಲಭ್ಯ ಕಲ್ಪಿಸಲು ಪೂರ್ವಸಿದ್ಧತೆ ಅಗತ್ಯವಿರುವುದರಿಂದ ಕೊನೆಯ ದಿನಾಂಕದ ನಂತರ ಬಂದ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ಸಂಸ್ಥೆಯ ಮುಖ್ಯಸ್ಥರು ಅಧಿವೇಶನದಲ್ಲಿ ಭಾಗವಹಿಸುವ ಪತ್ರಕರ್ತರ ಹೆಸರು, ಹುದ್ದೆ, ದೂರವಾಣಿ ಸಂಖ್ಯೆ ಮೊದಲಾದ ವಿವರಗಳನ್ನು ನಮೂದಿಸಿ ಶಿಫಾರಸ್ಸು ಪತ್ರವನ್ನು ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಕಳುಹಿಸಲು ಕೋರಿದೆ.
- ಹೆಚ್ಚಿನ ಮಾಹಿತಿಗೆ ಶ್ರೀ ಜಡಿಯಪ್ಪ ಗೆದ್ಲಗಟ್ಟಿ (22028011) ಇವರನ್ನು ಸಂಪರ್ಕಿಸಬಹುದು.

(ಡಾ. ಹರ್ಷ ಪಿ.ಎಸ್.)
ನಿರ್ದೇಶಕರು

# <u>ಪತ್ರಿಕಾ ಆಮಂತ್ರಣ</u>

1. One Day “National Seminar on “Green Cover Retention – The Critical Need, Policy and Practices”

   Date: 31-10-2017, Tuesday, Time 10.00 AM.

   Place: J.N. Tata Auditorium, Indian Institute of Science, Bengaluru.

2. Inauguration of The Citizen Connect app

   Inauguration:
   Siddaramaiah,
   Chief Minister, Karnataka

   Date: 31-10-2017 Tuesday at 11-15 a.m.
   Venue: Room No. 334, Conference Hall, Vidhana Soudha, Bangalore

   ಮೊಬೈಲ್ ಆಪ್‌ಗಳ ಅಧಿಕೃತ ಲೋಕಾರ್ಪಣೆ (ಜನ ಸಂಪರ್ಕ ಹಾಗೂ ರೈತರ ಬೆಳೆ ಸಮೀಕ್ಷೆ) :

   ಉದ್ಘಾಟನೆ:

   ಸಿದ್ದರಾಮಯ್ಯ,
   ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
   ದಿನಾಂಕ:31-10-2017 ಮಂಗಳವಾರ ಸಮಯ ಬೆಳಿಗ್ಗೆ 11-15 ಗಂಟೆಗೆ
   ಸ್ಥಳ: ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣ, ವಿಧಾನ ಸೌಧ, ಬೆಂಗಳೂರು

4. ಕರ್ನಾಟಕ ಸರ್ಕಾರದ ಜಾಲತಾಣಗಳಲ್ಲಿ ಕನ್ನಡ ಬಳಕೆ, ಶಿಷ್ಟತೆ, ಏಕರೂಪತೆ ಮತ್ತು ಸುಲಭಗ್ರಾಹ್ಯತೆ ಕುರಿತ ವರದಿ ಸಲ್ಲಿಕೆ:
   ವರದಿ ಸ್ವೀಕಾರ:

   ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
   ದಿನಾಂಕ: 31-10-2017 ಮಂಗಳವಾರ, ಅಪರಾಹ್ನ 12-00 ಗಂಟೆಗೆ
   ಸ್ಥಳ: ಸಮ್ಮೇಳನ ಸಭಾಂಗಣ, ಕೊಠಡಿ ಸಂಖ್ಯೆ 334, ವಿಧಾನ ಸೌಧ, ಬೆಂಗಳೂರು

# <u>ಪತ್ರಿಕಾ ಪ್ರಕಟಣೆ</u>

**ಸಂಖ್ಯೆ 231/351**

## ಜಾಗೃತಿ ಅರಿವು ಸಪ್ತಾಹ: ಪ್ರತಿಜ್ಞಾವಿಧಿ ಬೋಧನೆ

**ಬೆಂಗಳೂರು, ಅಕ್ಟೋಬರ್ 28, (ಕರ್ನಾಟಕ ವಾರ್ತೆ)**

ಜಾಗೃತಿ ಅರಿವು ಸಪ್ತಾಹ ಅಂಗವಾಗಿ ಇಂದು ಗೃಹ ಸಚಿವ ರಾಮಲಿಂಗಾರೆಡ್ಡಿ ಅವರು ಸಚಿವಾಲಯದ ಅಧಿಕಾರಿಗಳು ಹಾಗೂ ನೌಕರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾಮಾಣಿಕತೆ ಮತ್ತು ಕಾನೂನಿನ ನಿಯಮಗಳನ್ನು ಅನುಸರಿಸಬೇಕು, ಲಂಚವನ್ನು ಪಡೆಯುವುದಿಲ್ಲ ಹಾಗೂ ನೀಡುವುದೂ ಇಲ್ಲ. ಎಲ್ಲಾ ಕಾರ್ಯಗಳನ್ನು ಪ್ರಾಮಾಣಿಕ ಹಾಗೂ ಪಾರದರ್ಶಕ ರೀತಿಯಲ್ಲಿ ನಿರ್ವಹಿಸುತ್ತೇನೆ, ವೈಯುಕ್ತಿಕ ನಡಾವಳಿಕೆಯಲ್ಲಿ ನಿಷ್ಠೆ ಪ್ರದರ್ಶಿಸುವ ಮೂಲಕ ಮಾಧರಿಯಾಗಿರುತ್ತೇನೆ, ಅಲ್ಲದೆ ಯಾವುದೇ ಭ್ರಷ್ಟಾಚಾರದ ಘಟನೆಯನ್ನು ಸೂಕ್ತ ಸಂಸ್ಥೆಗೆ ವರದಿ ಮಾಡುತ್ತೇನೆ ಎಂದು ಗೃಹ ಸಚಿವರು ಪ್ರತಿಜ್ಞಾ ವಿಧಿ ಬೋಧಿಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್‌ಚಂದ್ರ ಕುಂಠಿಆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅನಿಲ್‌ಕುಮಾರ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ(ಜಾಗೃತಿ) ಇಲಾಖೆಯ ಉಪ ಕಾರ್ಯದರ್ಶಿಗಳಾದ ಶ್ರೀಮತಿ ಪಲ್ಲವಿ ಆಕುರತಿ, ಪಶುಸಂಗೋಪನಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜ್‌ಕುಮಾರ್ ಖತ್ರಿ ಸಚಿವಾಲಯದ ಅಧಿಕಾರಿಗಳು ಹಾಗೂ ನೌಕರರು ಪ್ರತಿಜ್ಞಾ ವಿಧಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮುಖ್ಯಮಂತ್ರಿಗಳಿಂದ ಎರಡು ಮೊಬೈಲ್ ಆ್ಯಪ್‌ಗಳ ಲೋಕಾರ್ಪಣೆ

**ಬೆಂಗಳೂರು, ಅಕ್ಟೋಬರ್ 30, (ಕರ್ನಾಟಕ ವಾರ್ತೆ)**

ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತಮ್ಮ ಜನಸಂಪರ್ಕ ಕಾರ್ಯಕ್ರಮಗಳ ಅಂಗವಾಗಿ ಅಕ್ಟೋಬರ್ 31 ರಂದು ಎರಡು ಹೊಸ ಮೊಬೈಲ್ ಆ್ಯಪ್‌ಗಳಿಗೆ ಚಾಲನೆ ನೀಡಲಿದ್ದಾರೆ.

ಅಕ್ಟೋಬರ್ 31 ರಂದು ಬೆಳಿಗ್ಗೆ 11.15 ಗಂಟೆಗೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ. ದಿ ಸಿಟಿಜೆನ್ ಕನೆಕ್ಟ್ ಆ್ಯಪ್ ಹಾಗೂ ರೈತರ ಬೆಳೆ ಸಮೀಕ್ಷೆ ಆಪ್‌ಗಳಿಗೆ ಅಧಿಕೃತ ಚಾಲನೆ ದೊರೆಯಲಿದೆ.

ದಿ ಸಿಟಿಜೆನ್ ಕನೆಕ್ಟ್ ಆ್ಯಪ್ ಎಂಬ ಹೆಸರಿನ ಈ ಆ್ಯಪ್‌ಅನ್ನು ಅಳವಡಿಸಿಕೊಂಡು ಸರ್ಕಾರದ ಉಪಕ್ರಮಗಳು, ಸಾಧನೆಗಳ ಕುರಿತು ತಾಜಾ ಮಾಹಿತಿ ಪಡೆಯಬಹುದಲ್ಲದೆ, ಕುಂದುಕೊರತೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಜೊತೆಗೆ ಮುಖ್ಯಮಂತ್ರಿಯವರು ನಡೆದು ಬಂದ ದಾರಿ, ಜಾಗೃತ ಮತ್ತು ಸಬಲ ನಾಗರಿಕರೊಂದಿಗೆ ಹೊಸ ಕರ್ನಾಟಕವನ್ನು ನಿರ್ಮಿಸುವ ಕುರಿತ ಅವರ ವಿಚಾರಗಳನ್ನು ಸಹ ತಿಳಿದುಕೊಳ್ಳಬಹುದು..

ಈ ಆ್ಯಪ್‌ನಲ್ಲಿ ಮುಖ್ಯಮಂತ್ರಿಗಳ ಕಚೇರಿಯ ಕ್ಷಣ ಕ್ಷಣದ ಸುದ್ದಿಗಳು, ಮುಖ್ಯಮಂತ್ರಿಗಳ ಬ್ಲಾಗ್, ಅವರ ಭಾಷಣ, ಸಂದರ್ಶನಗಳ ಮಾಹಿತಿ, ಲಿಂಕ್ ಲಭ್ಯವಿದೆ. ಬಳಕೆದಾರರು ಇಲಾಖಾವಾರು ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಮುಖ್ಯಮಂತ್ರಿಗಳ ಕಚೇರಿಯೊಂದಿಗೆ ಹಂಚಿಕೊಳ್ಳಲು ಇಲ್ಲಿ ಅವಕಾಶವಿದೆ. ಯೋಜನೆಗಳನ್ನು ಪರಿಣಾಮಕಾರಿಯಾಗಿ ರೂಪಿಸುವುದು ಮತ್ತು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈ ಆ್ಯಪ್ ಸಹಕಾರಿಯಾಗಲಿದೆ. ಜೊತೆಗೆ ಮುಖ್ಯಮಂತ್ರಿಗಳು ನೇರವಾಗಿ ನಾಗರಿಕರೊಂದಿಗೆ ಸಂವಾದ ನಡೆಸಲು ಅವಕಾಶವಿದ್ದು, ಇದು ಆಡಳಿತದಲ್ಲಿ ಜನರ ನೇರ ಸಹಭಾಗಿತ್ವವನ್ನು ಪ್ರೋತ್ಸಾಹಿಸಲು ಪೂರಕವಾಗಿದೆ.

**ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್:**

ಸರ್ಕಾರವು ರಾಜ್ಯದ ಪ್ರತಿ ಜಮೀನಿಗೆ ಭೇಟಿ ನೀಡಿ ಬೆಳೆ ಸಮೀಕ್ಷೆ ನಡೆಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. 2017-18ರ ಖಾರಿಫ್ ಹಂಗಾಮಿನಲ್ಲಿ ಬೆಳೆದ ಬೆಳೆಗಳಿಗೆ ಈ

ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ. ಈ ಕಾರ್ಯಕ್ಕಾಗಿ ಸುಮಾರು 15 ಸಾವಿರ ಅಧಿಕಾರಿ, ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಅಧಿಕಾರಿಗಳು ಜಿಪಿಎಸ್ ಕೋ-ಆರ್ಡಿನೇಟ್‌ಗಳೊಂದಿಗೆ ಜಮೀನಿನಲ್ಲಿ ಬೆಳೆದ ಬೆಳೆಗಳ ವಿವರವನ್ನು ಸಂಗ್ರಹಿಸುವರಲ್ಲದೆ ಮಾಲೀಕರ ಆಧಾರ್ ವಿವರಗಳನ್ನು ಸಹ ಸಂಗ್ರಹಿಸುವರು. ಈ ದತ್ತಾಂಶ ಸಂಗ್ರಹಿಸುವ ಕೆಲಸ ಬೃಹತ್ ಪ್ರಮಾಣದಲ್ಲಿ ಆಗಬೇಕಾಗಿರುವುದರಿಂದ ಇದು ನಿಧಾನವಾಗುವ ಸಾಧ್ಯತೆ ಇದೆ. ಇದನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿ ಪಡಿಸಲಾಗಿದೆ. ಇದು ಸಾಮಾನ್ಯವಾಗಿ ಬಳಸುವ ಬೆಳೆ ಸಮೀಕ್ಷೆ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್‌ನ ಸಂಕ್ಷಿಪ್ತ ರೂಪ. ರೈತರು ಈ ಆ್ಯಪ್ ಮೂಲಕ ತಮ್ಮ ಬೆಳೆಗಳ ಕುರಿತು ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಮಾಹಿತಿಯು ಸರ್ಕಾರಕ್ಕೆ ನೆರವಾಗಲಿದೆ.

- ಇದರಿಂದ ಕನಿಷ್ಠ ಬೆಂಬಲ ಬೆಲೆ ಸೌಲಭ್ಯ ವಿತರಣೆಯನ್ನು ಪರಿಣಾಮಕಾರಿಯಾಗಿ ಕೈಗೆತ್ತಿಕೊಳ್ಳಲು ನೆರವಾಗಲಿದೆ. ಈ ಸೌಲಭ್ಯ ಪಡೆಯಲು ಇಚ್ಛಿಸುವ ರೈತರಿಗೆ ಅವರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲು ಅವಕಾಶವಿದೆ.
- ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿಯಲ್ಲಿ ತೊಡಗಿದ ಎಲ್ಲ ರೈತರನ್ನೂ ಈ ವ್ಯಾಪ್ತಿಗೆ ಒಳಪಡಿಸಬಹುದು.
- ರೈತರಿಗೆ ನೆರೆ ಅಥವಾ ಬರದಂತಹ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಪರಿಹಾರ ಒದಗಿಸಲು ಹಾಗೂ ಈ ಪರಿಹಾರದ ಮೊತ್ತವನ್ನು ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲು ಸಾಧ್ಯವಾಗುತ್ತದೆ.
- ರೈತರು ಬೆಳೆ ವಿಮಾ ಯೋಜನೆಗಳಿಗೆ ನೋಂದಾಯಿಸಲು ನೆರವಾಗುತ್ತದೆ.
- ಈ ಬೆಳೆಗಳನ್ನು ಆರ್‌ಟಿಸಿಯಲ್ಲಿ ದಾಖಲಿಸುವುದರಿಂದ ಬೆಳೆಸಾಲ ಸುಗಮವಾಗಿ ದೊರೆಯಲು ಅನುಕೂಲವಾಗುತ್ತದೆ.

ಸಂಖ್ಯೆ 233/353

## ಪೊಲೀಸ್ ಇಲಾಖೆಯ ಮಾದರಿಯಲ್ಲಿ ಅರಣ್ಯ ಇಲಾಖೆಯಿಂದ ಪ್ರಶಸ್ತಿ

ಬೆಂಗಳೂರು, ಅಕ್ಟೋಬರ್ 30, (ಕರ್ನಾಟಕ ವಾರ್ತೆ)

ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಅತ್ಯುತ್ತಮ ಸೇವೆಗೈದ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ನೌಕರರುಗಳನ್ನು ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆಯ ಮಾದರಿಯಲ್ಲಿ ಪ್ರಶಸ್ತಿ ಪದಕ ನೀಡಿ ಸನ್ಮಾನಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ಪರಿಸರ ವನ್ಯಜೀವಿ, ಅರಣ್ಯ ಸಚಿವ ಬಿ. ರಮಾನಾಥ ರೈ ಅವರು ತಿಳಿಸಿದರು.

ಬಿ. ಮಾರಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು ಮತ್ತು ಅರಣ್ಯ ಇಲಾಖೆ ಇಂದು ಮಲ್ಲೇಶ್ವರದ ಅರಣ್ಯಭವನದಲ್ಲಿ ವಿಶೇಷ ಸೇವೆ ಸಲ್ಲಿಸಿರುವ ಅರಣ್ಯ ನೌಕರರುಗಳಿಗೆ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭ –2017 ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಶಸ್ತಿ ಪ್ರದಾನ ನೆರವೇರಿಸಿದ ನಂತರ ಮಾತನಾಡಿದ ಅವರು ಅರಣ್ಯ ಉಳಿಸುವ ಬಗ್ಗೆ ಸಾರ್ವಜನಿಕರು ವರ್ತಮಾನದಲ್ಲಿ ಗಂಭೀರವಾಗಿ ಯೋಚಿಸುತ್ತಿದ್ದಾರೆ, ಅರಣ್ಯವಿಲ್ಲದೆ ಬದುಕು ಇಲ್ಲ ಎಂಬುದನ್ನು ಜನರು ಅರಿತಿದ್ದಾರೆ ಎಂದು ತಿಳಿಸಿದರು.

ಜನಸಂಖ್ಯೆ ಹೆಚ್ಚಿದಂತೆಲ್ಲಾ ಅರಣ್ಯದ ಮೇಲೆ ಒತ್ತಡ ಹೆಚ್ಚುತ್ತಿದೆ. ಅರಣ್ಯದ ಮೇಲೆ ಒತ್ತಡ ಬಾರದಿರುವ ಹಾಗೆ ಅರಣ್ಯದಂಚಿನ ಗ್ರಾಮಸ್ಥರಿಗೆ ಸೌರ ವಿದ್ಯುತ್, ಸೌರ ಒಲೆ, ವಾಟರ್ ಹೀಟರ್ ಅನಿಲ ಸಂಪರ್ಕಗಳನ್ನು ನೀಡಲಾಗುತ್ತಿದೆ ಎಂದರು.

ನದಿಗಳ ಜಲ ಮೂಲ ಅರಣ್ಯಗಳೇ ಆಗಿವೆ. ಆದ್ದರಿಂದ ಅರಣ್ಯಗಳನ್ನು ಮತ್ತು ವನ್ಯಜೀವಿಗಳನ್ನು ಉಳಿಸಬೇಕು ಎಂದ ಅವರು ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ ಬರುವುದಕ್ಕೂ ಮುಂಚೆ ಲಕ್ಷಾಂತರ ಹೆಕ್ಟೇರ್ ಅರಣ್ಯ ಪ್ರದೇಶ ಸಾರ್ವಜನಿಕರ ಇತರೆ ಕಾರ್ಯಗಳಿಗೆ ಬಳಕೆಯಾಗುತ್ತಿತ್ತು. ಆದರೆ ಕಾಯ್ದೆ ಬಂದ ನಂತರ ಅರಣ್ಯ ಪ್ರದೇಶದ ಒತ್ತುವರಿ ನಿಯಂತ್ರಣಗೊಂಡಿದೆ ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಗೃಹಸಚಿವ ರಾಮಲಿಂಗಾರೆಡ್ಡಿ ಅವರು ಮಾತನಾಡಿ ನಮ್ಮ ದೇಶಕ್ಕೆ ಸ್ವಾತಂತ್ರ್ಯಬಂದಾಗ ನಮ್ಮ ದೇಶದಲ್ಲಿ ಸಾಕಷ್ಟು ಅರಣ್ಯವಿತ್ತು. ಆದರೆ ಜನಸಂಖ್ಯೆ

ಹೆಚ್ಚಿದಂತೆಲ್ಲಾ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ. ಹಿಂದೆ ಉರುವಲಿಗೆ ಕಾಡು ನಾಶವಾಗುತ್ತಿತ್ತು. ಆದರೆ ಈಗ ಹಳ್ಳಿಹಳ್ಳಿಗಳಲ್ಲಿ ಅನಿಲ ಬಳಕೆಯಾಗುತ್ತಿರುವ ಕಾರಣ ಕಾಡು ಕಡಿಯುವ ಪ್ರಕ್ರಿಯೆ ಕಳೆದ 20–30 ವರ್ಷಗಳಿಂದ ಕಡಿಮೆಯಾಗಿದೆ ಎಂದರು.

ಅರಣ್ಯ ಸಂರಕ್ಷಣೆಯ ಜೊತೆಗೆ ಪರಿಸರ ಕಾಳಜಿಯು ಸಾರ್ವಜನಿಕರಲ್ಲಿ ಹೆಚ್ಚಬೇಕು. ಪಿಒಪಿ ಗಣೇಶ, ಬಣ್ಣದ ಗಣೇಶ ಮೂರ್ತಿಗಳ ವಿಸರ್ಜನೆ ನಿಲ್ಲಬೇಕು. ದೀಪಾವಳಿ ಸಂದರ್ಭಲ್ಲಿ ಪಟಾಟಿಯಿಂದ ವಾಯು ಮಾಲಿನ್ಯ ಹೆಚ್ಚುತ್ತಿದ್ದು ಸಾಂಕೇತಿಕವಾಗಿ ಮಾತ್ರ ಪಟಾಕಿಯನ್ನು ಹೊಡೆಯಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ಪ್ರಮುಖ ಅರಣ್ಯ ಸಂರಕ್ಷಣಾಧಿಕಾರಿ ಸುಗಾರ, ಅರಣ್ಯ ಪ್ರಮುಖ ಸಂರಂಕ್ಷಣಾಧಿಕಾರಿ ಪುನಟಿ ಶ್ರೀಧರ್, ಅಪರ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ, ಅಜೆಯ್ ಮಿಶ್ರಾ, ನಿವೃತ್ತ ಐ.ಎ.ಎಸ್. ಅಧಿಕಾರಿಗಳಾದ ಎಂ.ಬಿ. ಪ್ರಕಾಶ್, ಎ.ಎಸ್. ಸದಾಶಿವಯ್ಯ ಮ್ಯಾನೇಜಿಂಗ್ ಟ್ರಸ್ಟಿ ಎಂ. ಸಂಪಂಗಿ ಮತ್ತಿತರರು ಉಪಸ್ಥಿತರಿದ್ದರು.

**ಸಂಖ್ಯೆ 234/3534**

## ಬದಲಾದ ವೇಳಾಪಟ್ಟಿ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಅಕ್ಟೋಬರ್ 30 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2015 ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯನ್ನು ಈ ಸಾಲಿನ ಡಿಸೆಂಬರ್ 16 ರಿಂದ ಡಿಸೆಂಬರ್ 23 ರವರೆಗೆ ನಡೆಸಲಿದ್ದು, ಪರೀಕ್ಷೆ ಬರೆಯಲು ಹೆಚ್ಚುವರಿ ಕಾಲಾವಕಾಶ ಪಡೆಯಲು ಅರ್ಹರಿರುವ ಅಂಧ / ದೃಷ್ಟಿಮಾಂದ್ಯ / ಬರವಣಿಗೆ ಕುಂಠಿತಗೊಂಡಿರುವ ಚಲನವನವೈಕಲ್ಯ/ಮೆದುಳಿನ ಪಾರ್ಶ್ವವಾಯು ಹೊಂದಿರುವ ಅಭ್ಯರ್ಥಿಗಳ ಕೋರಿಕೆಯಂತೆ ಆಯೋಗವು ಈ ಹಿಂದೆ ಪ್ರಕಟಿಸಿದ್ದ ವೇಳೆಯನ್ನು ಪರಿಷ್ಕರಿಸಿ ಬದಲಾದ ವೇಳೆಯ ವಿವರವಾದ ವೇಳಾಪಟ್ಟಿಯನ್ನು ಆಯೋಗ ವೆಬ್‌ಸೈಟ್ http://kpsc.kar.nic.in/Time table ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ.ಜಿಪಿಆರ್.

**ಸಂಖ್ಯೆ 235/355**

# ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ತರಬೇತಿ ಶಿಬಿರ

ಬೆಂಗಳೂರು, ಅಕ್ಟೋಬರ್ 30 (ಕರ್ನಾಟಕ ವಾರ್ತೆ)

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವಕ–ಯುವತಿಯರಿಗಾಗಿ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ 2017 ನೇ ಸಾಲಿನ ನವೆಂಬರ್ ಮತ್ತು ಡಿಸೆಂಬರ್ ಮಾಹೆಗಳಲ್ಲಿ ಹಲವಾರು ತರಬೇತಿ ಶಿಬಿರಗಳನ್ನು ಬೆಂಗಳೂರಿನ ರಾಜ್ಯ ಯುವ ಕೇಂದ್ರ/ಕೋರಮಂಗಲ ಒಳಾಂಗಣ ಕ್ರೀಡಾಂಗಣ/ಕುಂಬಳಗೂಡು ಯುವ ಜನ ತರಬೇತಿ ಕೇಂದ್ರ ಹಾಗೂ ಇಲಾಖೆಯ ಅಧೀನದಡಿಯಲ್ಲಿನ ತರಬೇತಿ ನೀಡುವ ಕೇಂದ್ರಗಳಲ್ಲಿ ಆಯೋಜಿಸಲಾಗುವುದು.

ವಯೋಮಾನ 15 ವರ್ಷ ದಿಂದ 35 ವರ್ಷದೊಳಗಿನ ಯುವಕ–ಯುವತಿಯರು ತರಬೇತಿಯಲ್ಲಿ ಪಾಲ್ಗೊಳ್ಳಲು ಅವಕಾಶ. ಪ್ರತಿ ತರಬೇತಿ ರೂ 100/– ಗಳ ಶುಲ್ಕವಿದೆ.

ಆಸಕ್ತ ಯುವಕ/ ಯುವತಿಯರು ತಮ್ಮ ಆಧಾರ್ ಕಾರ್ಡ್ ಸಂಖ್ಯೆ, ಇತ್ತೀಚಿನ ಎರಡು ಭಾವಚಿತ್ರ ಮತ್ತು ಗರಿಷ್ಠ ವಿದ್ಯಾರ್ಹತೆಯ ಪ್ರಮಾಣ ಪತ್ರದ ಮೂಲಕ ದೃಢೀಕೃತ ನಕಲು ಪ್ರತಿಯೊಂದಿಗೆ ಉಪ ನಿರ್ದೇಶಕರು (ಯುಸೇ), ರಾಜ್ಯ ಯುವ ಕೇಂದ್ರ, ನೃಪತುಂಗರಸ್ತೆ, ಬೆಂಗಳೂರು – 012 ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 080–22214911/9352910259 ಮೂಲಕ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

12 ದಿನಗಳ ಮೊಬೈಲ್ ದುರಸ್ತಿ ಕುರಿತ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ನವೆಂಬರ್ 7 ರಿಂದ 18 ರವರೆಗೆ ತರಬೇತಿ ನಡೆಯಲಿದೆ.

6 ದಿನಗಳ ಎಂಬ್ರಾಯಿಡರಿ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ನವೆಂಬರ್ 8 ರಿಂದ 13 ರವರೆಗೆ ನಡೆಯಲಿದೆ.

12 ದಿನಗಳ ಟ್ಯಾಲಿ ತರಬೇತಿ ಪ್ರೋಗ್ರಾಮ್ ಹಾಗೂ ಬೇಕಿಂಗ್ ಹಾಗೂ ಕೇಕ್ ಆರ್ಟ್ ಕುರಿತ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ನವೆಂಬರ್ 14 ರಿಂದ 25 ರವೆಗೆ ನಡೆಯಲಿದೆ.

ಆರು ದಿನಗಳ ಫೋಟೋಗ್ರಾಫಿ ಹಾಗೂ ವೀಡಿಯೋಗ್ರಾಫಿ ಕುರಿತ ಟ್ರೈನಿಂಗ್‌ಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ಕ್ರಮವಾಗಿ

ನವೆಂಬರ್ 27 ರಿಂದ ಡಿಸೆಂಬರ್ 2 ರವರೆಗೆ  ಹಾಗೂ ನವೆಂಬರ್ 27 ರಿಂದ ಡಿಸೆಂಬರ್ 6 ರವರೆಗೆ ನಡೆಯಲಿದೆ.

10 ದಿನಗಳ ಬ್ಯಾಂಕಿಂಗ್ ಹಾಗೂ ಇಲೆಕ್ಟ್ರೀಷಿಯನ್ ತರಬೇತಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ಕ್ರಮವಾಗಿ ಡಿಸೆಂಬರ್ 7 ರಿಂದ 6 ರವರೆಗೆ ಹಾಗು ಡಿಸೆಂಬರ್ 7 ರಿಂದ 18 ರವರೆಗೆ ನಡೆಯಲಿದೆ.

12 ದಿನಗಳ ಸೋಲಾರ್ ಟೆಕ್ನಿಷಿಯನ್ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ಡಿಸೆಂಬರ್ 7 ರಿಂದ 18 ರವರೆಗೆ ನಡೆಯಲಿದೆ.

10 ದಿನಗಳ ಬ್ಯೂಟಿಚಿಯನ್ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ಡಿಸೆಂಬರ್ 14 ರಿಂದ 23-12-2017 ರವೆಗೆ ನಡೆಯಲಿದೆ.

12 ದಿನಗಳ ಹೌಸ್ ಕೀಪಿಂಗ್ ಹಾಗೂ ಫೆಸಿಲಿಟಿ ಮ್ಯಾನೇಜ್‌ಮಂಟ್ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ಡಿಸೆಂಬರ್ 19 ರಿಂದ 23-12-2017 ರವರೆಗೆ ನಡೆಯಲಿದೆ.

ಆರು ದಿನಗಳ ವಾಟರ್ ಪ್ಯೂರಿಫೈರಿಂಗ್ ತರಬೇತಿಗಾಗಿ ಎಸ್.ಎಸ್.ಎಲ್.ಸಿ. ಪಾಸ್/ಫೈಲ್ ಆದ ಅಭ್ಯರ್ಥಿಗಳು ಅರ್ಹರಿದ್ದು ತರಬೇತಿಯು ಡಿಸಬರ್ 23 ರಿಂದ 28 ರವರೆಗೆ ನಡೆಯಲಿದೆ.

ಎಸ್‌ಎಂ.ಜಿಪಿಆರ್.

ಸಂಖ್ಯೆ 236/356

## ಅವಧಿ ವಿಸ್ತರಣೆ

ಬೆಂಗಳೂರು, ಅಕ್ಟೋಬರ್ 30 (ಕರ್ನಾಟಕ ವಾರ್ತೆ)

2018 ನೇ ಮಾರ್ಚ್/ಏಪ್ರಿಲ್ ನಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವ ಅಭ್ಯರ್ಥಿಗಳ ನೊಂದಣಿ, ಪರೀಕ್ಷಾ ಶುಲ್ಕ ಹಾಗೂ ನಾಮಿನಲ್ ರೋಲ್ ಪ್ರಸ್ತಾವನೆಗಳನ್ನು ಸಲ್ಲಿಸುವ ದಿನಾಂಕಗಳನ್ನು ಅಂತಿಮವಾಗಿ ವಿಸ್ತರಿಸಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಪ್ರಕಟಣೆ ತಿಳಿಸಿದೆ.

ಈ ಹಿನ್ನಲೆಯಲ್ಲಿ ಖಾಸಗಿ ಆಭ್ಯರ್ಥಿಗಳಾಗಿ ಜಿಲ್ಲಾ ಉಪನಿರ್ದೇಶಕರ ಕಚೇರಿಯಲ್ಲಿ ನೋಂದಣೆ ಮಾಡಿಕೊಳ್ಳಲು ದಿನಾಂಕ : 10–11–2017. ಶಾಲೆಯವರು ಶಾಲಾ/ಖಾಸಗಿ/ಪುನರಾವರ್ತಿತ ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಿ ಬ್ಯಾಂಕಿಗೆ ಎನ್ಇಎಫ್‌ಟಿ ಚಲನ್ ಮೂಲಕ ಜಮೆ ಮಾಡುವ ದಿನಾಂಕ 13–11–2017 ಹಾಗೂ ನಾಮಿನಲ್ ರೋಲ್ ಪ್ರಸ್ತಾವನೆ ಹಾಗೂ ಬ್ಯಾಂಕ್ ಚಲನ್‌ನ ಮೂಲ ಪ್ರತಿ ಶಾಲೆಗಳಿಂದ ಮಂಡಳಿಗೆ ತಲುಪಿಸುವ ದಿನಾಂಕ 14–11–2007 ಆಗಿರುತ್ತದೆ.